ತಿರುಗಿ ಬರಲು ಉದ್ಯುಕ್ತಳಾದಳು. ಮಗ ಅವಳ ಅವಸ್ಥೆ ನೋಡಿ ಕಳಿಸಿಬಿಟ್ಟ. ಅವನು ಅಲ್ಲೇ ನೆಲೆ ನಿಂತು ಡಾಲರ್‌ಗಳಲ್ಲಿ ಕಳೆದು ಹೋದ. ಜಯತ್ತೆ ಒಮ್ಮೊಮ್ಮೆ ವಿಷಾದಪಡುತ್ತಾಳೆ. ಹರಯದವರಿಗೆ ಅಲ್ಲಿನ ಸ್ವಚ್ಛಂದ ವಿಲಾಸಿ ಜೀವನ, ಕಟ್ಟುಪಾಡುಗಳಿಲ್ಲದ ಬದುಕು ಇಷ್ಟವಾಗುತ್ತದೆ. ಬೇರುಗಳನ್ನು ಅರಸಿ ಬರುವವರು ತಿರುಗಿ ಬರುತ್ತಾರೆ.

ವಿದೇಶ ದೂರದ ಬೆಟ್ಟ. ಪ್ಯಾರಿಸ್ಸಿಗೆ ಹೋದಾಗಿನ ಅನುಭವ. ನಮಗೆ ಫ್ರೆಂಚ್ ಗೊತ್ತಿಲ್ಲ. ಅಲ್ಲಿನವರು ಹೆಚ್ಚಾಗಿ ಇಂಗ್ಲಿಷ್ ಮಾತನಾಡದ ಮಾತೃಭಾಷಾ ಪ್ರಿಯರು. ಪ್ರವಾಸಿ ತಾಣಗಳಲ್ಲಿ ಪರವಾಗಿಲ್ಲ. ಉಳಿದಲ್ಲಿ ಕಷ್ಟವೇ. ಅಲ್ಲಿನ 'ಡಿಸ್ನಿ ಲ್ಯಾಂಡ್' ನೋಡಿಕೊಂಡು ಹಿಂದಿರುಗುವಾಗ ರೈಲು ನಿಲ್ದಾಣ, ಟ್ಯೂಬ್ ಸ್ಟೇಷನ್‌ನಲ್ಲಿ ಸಿಕ್ಕಿಹಾಕಿಕೊಂಡೆವು. 'ಸೊರ್ಟೆ' ಎಂದರೆ ಹೊರಹೋಗುವ ದಾರಿ ಎಂದು ಅರಿತು ಹೊರಟೆವು. ಯಾವ ಫಲಕವೂ ಇಂಗ್ಲಿಷ್‌ನಲ್ಲಿಲ್ಲ. ಪ್ರತಿಯೊಂದು ಸೊರ್ಟೆ ಇನ್ನೊಂದು ಏರಿಯಾಕ್ಕೆ ಹೋಗುವ ರೈಲಿಗೆ ತೆರೆದುಕೊಳ್ಳುತ್ತಿತ್ತು. ಸಹಾಯ ಕೇಳಿದಾಗ ಚೆನ್ನಾಗಿ ವಿವರಿಸಿದರು. ಮತ್ತದೇ ಕಥೆ. ಸುತ್ತಿದ್ದೇ ಸುತ್ತಿದ್ದು. ಮಕ್ಕಳು ಸುಸ್ತಾಗಿ ಕೆಳಗೆ ಕುಳಿತುಬಿಟ್ಟರು. ಅಂದೇ ನಮಗೆ ಲಂಡನ್ನಿಗೆ ಹೊರಡಬೇಕಿತ್ತು. ಮರುದಿನದ ವೀಸಾ ಇಲ್ಲ. ಸಮಯ ಮೀರುತ್ತಿತ್ತು. ಕೊನೆಗೆ ಎಲ್ಲ ಶಿಷ್ಟಾಚಾರ ಮರೆತು ನಾನು, "ಇಲ್ಲಿ ಯಾರಾದರೂ ಇಂಗ್ಲಿಷ್ ಬಲ್ಲವರಿದ್ದೀರಾ? ದಯವಿಟ್ಟು ನಮಗೆ ಸಹಾಯ ಮಾಡಿ" ಎಂದು ಕೂಗಿದೆ. ಒಬ್ಬ ನಮ್ಮ ತೊಂದರೆ ಅರಿತು, ನಮ್ಮ ಜೊತೆ ಬಂದು ಹೊರಗೆ ಹೋಗುವ ದಾರಿಯ ಹತ್ತಿರಕ್ಕೆ ನಮ್ಮನ್ನು ಬಿಟ್ಟು ಕೈ ಮಾಡಿ ತೋರಿಸಿ ಹೋದ. ಅನಂತರ 'ಉಸ್ಸಪ್ಪಾ' ಎಂದು ಹೊರಬಂದು ಲಂಡನ್ನಿಗೆ ಹಿಂದಿರುಗಿದೆವು.

ಇಂದು ವಿದೇಶ ಬಲು ದೂರವೇನಿಲ್ಲ. ಮನೆಯಿಂದ ಅಥವಾ ಹತ್ತಿರದ ನೆಂಟರಲ್ಲಿ ಒಬ್ಬಿಬ್ಬರಾದರೂ ಇದ್ದೇ ಇರುತ್ತಾರೆ. ಅಲ್ಲಿಯೂ ತಮ್ಮ ಭಾಷೆಯ, ತವರಿನ ಸೊಗಡನ್ನು ಪಸರಿಸುತ್ತಾರೆ. ಸಂಘ, ಸಂಸ್ಥೆಗಳನ್ನು ಸ್ಥಾಪಿಸಿಕೊಂಡು ಕಾರ್ಯಕ್ರಮ ನಡೆಸುತ್ತಾರೆ. ಮಾತೃಭೂಮಿಯನ್ನು ಮರೆಯದೇ, "ಎಲ್ಲಾದರೂ ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಕುವೆಂಪು ವಾಣಿಯಂತೆ ಬದುಕುವುದೇ ಚೆಂದ.

ಹೀಗೆ ಪಟ್ಟಿ ಮಾಡುತ್ತ ಹೋದರೆ ಇಂಥ ಜಾತಿಗಳಿಗೆ ಮಿತಿಯೇ ಇಲ್ಲ. ಚಹಾದ ಜಾತಿಯವರು, ಕಾಫಿಪ್ರೇಮಿಗಳು, ಡಯಟಿಂಗ್ ಜಾತಿಯವರು, ರಾಜಕಾರಣದ ಪ್ರೇಮಿಗಳು... ಹೀಗೆ ಬೆಳೆಯುತ್ತ ಆಕಾಶದಲ್ಲಿನ ತಾರೆಗಳಷ್ಟಾಗುತ್ತದೆ ಬಿಡಿ. ಮನುಷ್ಯನ ಸ್ವಭಾವ, ರುಚಿಗಳಿಗೆ ತಕ್ಕಂತೆ ವಿಧವಿಧವಾದ ಜಾತಿಗಳು. ಹ್ಞಾಂ, ಇವೆಲ್ಲ ಜಾತ್ಯತೀತವಾದ ಜಾತಿಗಳು. ಹುಟ್ಟಿನಿಂದಲ್ಲ, ಅಭ್ಯಾಸ ಇಷ್ಟಗಳಿಂದ ಬಂದದ್ದು. ಇದೇ ಒಳ್ಳೆಯದಲ್ಲವೆ? ಹ್ಞಾಂ... ಇದರಲ್ಲಿ ನೀವ್ಯಾವ ಜಾತಿ? ಯಾವ ಮೀಸಲಾತಿಯ ಕೆಟಗರಿ ನಿಮ್ಮದು ನೋಡಿಕೊಳ್ಳಿ.


## ಮಧುರಾ ಕರ್ಣಮ್

ಲೇಖಕಿ ಮಧುರಾ ಬೆಳಗಾವಿಯವರು. ವಿದ್ಯಾಭ್ಯಾಸ – ಬಿ.ಎಸ್ಸಿ., ಎಲ್‌ಎಲ್‌ಬಿ. ಕತೆ, ಹಾಸ್ಯಬರಹಗಳನ್ನು ಬರೆದಿದ್ದಾರೆ. 'ಮರಳಿ ಬಂದನಾ ವಸಂತ', 'ಋಣ', 'ಅವಳ ಭಾವಗಳ ಸುತ್ತ', 'ಗುಂಡಪುರಾಣ', 'ಜೀವಧಾರಾ... ನಿರಂತರಾ...', 'ಆಕ್ರಮಣ' ಅವರ ಪ್ರಕಟಿತ ಕೃತಿಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.